ಹಾಕಿಸಿ. ಅಲ್ಲಿ ಬಂದು ನೋಡಿ ಆದ ಮೇಲೆ ನೀವು ಅವರೂ ಇಬ್ಬರೂ ಜೊತೆಗೆ ಇನ್ಸ್‌ಪೆಕ್ಷನ್ ಮಾಡಿ ಡಿಸಿಷನ್ ತೆಗೆದುಕೊಳ್ಳಿ. ಆಯಿತಲ್ಲಾ ಮತ್ತೇನು ವಿಚಾರ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಒಂದು ವಿಚಾರ ನಾನು ಮುಖ್ಯವಾಗಿ ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ಈ ನಗರ ಪಟ್ಟಣಗಳಲ್ಲಿ ಎಲ್ಲಿ ಅವರು ಈ ಇಲಾಖೆಯಿಂದ ಕೆಲಸ ಮಾಡುತ್ತಿದ್ದಾರೆ; ಅವರು ಮುಖ್ಯವಾಗಿ ಏನು ಕೆಲಸ ಮಾಡುತ್ತಾರೆ ಎಂದರೆ ಅವರು ಬರೀ ಕೆರೆ ಹಾಳು ಮಾಡುವುದೊಂದೇ ಕೆಲಸ ಮಾಡುತ್ತಿದ್ದಾರೆ. ಆದರೆ ಅದಕ್ಕಾಗಿ ನೀವು ಐದಾರು ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಈ ಪೈಪಲೈನ್ ಮತ್ತು ಸಣ್ಣ ಸಣ್ಣ ಜಲವಿದ್ಯುತ್ ಗಾರಕ ಇತ್ಯಾದಿ ಕೆಲಸಗಳಿಗೆ 70-80 ಲಕ್ಷ ರೂಪಾಯಿ ಬೇಕಾದಾಗ ಇವನ್ನು ಇಟ್ಟುಕೊಂಡು ಸುಮ್ಮನೆ ಐದೈದು ವರ್ಷ, ಹತ್ತತ್ತು ವರ್ಷ ಈ ಯೋಜನೆಗಳನ್ನು ನನಗೆ ಅನಿಸುತ್ತದೆ.

ಅಧ್ಯಕ್ಷರು : ಕ್ವೊಶ್ಚನ್ ಅವರ್ ಟೈಮ್ ಹೋಗಿ ಬಿಡುತ್ತದೆ.

ಶ್ರೀಮಂಜನಾಥ್ ಸಿ. ಕುನ್ನೂರು : ಈ ಕೆಲಸಗಳು ನಮ್ಮ ರಾಜ್ಯದಲ್ಲಿ ಏನ ಇದ್ದಾರೆ ಆದ್ಯತೆಯ ಮೇಲೆ ಮಾಡಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಟೂರ್ ಹೋದಾಗ ಅವೆಲ್ಲಾ ಸಜೆಷನ್ ಕೊ , ಅವರು ಒಳ್ಳೆಯ ಮನುಷ್ಯರು.

ಮೈಸೂರಿನಲ್ಲಿರುವ ರೇಷ್ಮೆ ಗೂಡು ಮಾರುಕಟ್ಟೆ ಬಗ್ಗೆ.

96 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ಬಿತ್ತನೆ ವಲಯದಲ್ಲಿ ಇರುವ ರೇಷ್ಮೆ ಮಾರುಕಟ್ಟೆಗಳ ಸಂಖ್ಯೆ ಎಷ್ಟು?

2) ಪ್ರತಿಯೊಂದು ಮಾರುಕಟ್ಟೆಗೂ ದಿನವೊಂದಕ್ಕೆ ಬರುತ್ತಿರುವ ಸರಾಸರಿ ಗೂಡು ಎಷ್ಟು?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

1) 8 (ಎಂಟು)

2) 0.750 ಟನಗಳು.

6.000 ಟನ್‌ಗಳು ಎಲ್ಲಾ ಮಾರುಕಟ್ಟೆಗಳು ಸೇರಿ.

ಶ್ರೀ ಟಿ.ಬಿ. ಜಯಚಂದ್ರ : (ಶ್ರೀ ಎಸ್. ಪಿ. ಮುದ್ದಹನುಮೇಗೌಡ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮೈಸೂರು ಬಿತ್ತನೆ ವಲಯದಲ್ಲಿ ಎಂಟು ಮಾರುಕಟ್ಟೆಗಳು ಇವೆ. ಸುಮಾರು 750 ಟನಗಳು ಸರಾಸರಿ ಒಂದು ವರ್ಷಕ್ಕೆ ಗೂಡು ಬರುತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಉತ್ತರದಿಂದ ನಮಗೆ ತೃಪ್ತಿ ಆಯಿತು. ಈಗ ನಮಗೆ ಬಹಳ ಪ್ರಾಮುಖ್ಯವಾಗಿ ಕೇಳಬೇಕಾಗಿರತಕ್ಕ ಪ್ರಶ್ನೆ ಅಂದರೆ

ಬಿತ್ತನೆ ಅಲ್ಲದೇ ಇರತಕ್ಕ ಪ್ರದೇಶಗಳು ಏನು ಇವೆ, ಅಲ್ಲಿ ರಾಜ್ಯದಲ್ಲಿರತಕ್ಕಂಥ ಮಾರುಕಟ್ಟೆಗಳು ಎಷ್ಟು ಎಂಬುದು ಒಂದು ಉಪ ಪ್ರಶ್ನೆ. ಮತ್ತು ಎರಡನೆಯದಾಗಿ ವೈಯಕ್ತಿವಾಗಿ ಗೊತ್ತಿರತಕ್ಕದ್ದು. ಇವತ್ತು ಶಿರಾ, ಮಧುಗಿರಿ, ಕೊರಟಗೆರೆ, ಪಾವಗಡ ಭಾಗದಲ್ಲೆ ಹೆಚ್ಚು ರೇಷ್ಮೆಯನ್ನು ಬೆಳೆಯತಕ್ಕದ್ದು. ಇವತ್ತು ಸಿರಾ ದಿಂದ ರಾಮನಗರಕ್ಕೆ ಪ್ರತಿ ನಿತ್ಯ ಹೆಚ್ಚು ಕಡಿಮೆಎಂದರೆ 4 ರಿಂದ ಐದೂ ಲೋಡ್ ರೇಷ್ಮೆಗೂಡು ಬರುವ ದೃಷ್ಟಿ ಇರುವುದರಿಂದ, ದಯಮಾಡಿ ಭಿತ್ತನೆ ವಲಯ ಇಲ್ಲದೇ ಇರತಕ್ಕ ಪ್ರದೇಶವಾದ ಸಿರಾದಲ್ಲಿ ಏನಾದರೂ ಮಾರುಕಟ್ಟೆ ಮಾಡುವ ಯೋಜನೆ ಸರ್ಕಾರದಲ್ಲಿ ಇದೆಯೋ? ಎನ್ನತಕ್ಕದ್ದು ನನ್ನ ಪ್ರಶ್ನೆ.

ಶ್ರೀ ಡಿ.ನಾಗರಾಜಯ್ಯ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಪ್ರಕಾರ ಇಡೀ ರಾಜ್ಯದಲ್ಲಿ ಬಿತ್ತನೆ ವಲಯದಲ್ಲಿ ಬರತಕ್ಕ ಮಾರುಕಟ್ಟೆಯಸಂಖ್ಯೆ ಎಂಟು. ಹುಲಿಯೂರುದುರ್ಗ, ಕುಣಿಗಲ್, ಕೆಂಪನಹಳ್ಳಿ, ಸಂತೆಮಾದನೂರು , ಹೆಬ್ಬೂರು, ಮಾಗಡಿ, ವೀಡೆ ದೊಡ್ಡಿ,. ಕೂದೂರು, ಈ ಎಂಟು ಮಾರುಕಟ್ಟೆಯನ್ನು ಬಿಟ್ಟು ಬಿತ್ತನೆ ಏರಿಯಾ ಅಲ್ಲದೇ ಇರತಕ್ಕ ಪ್ರದೇಶದಲ್ಲಿ ಬರತಕ್ಕಂಥಹದು 56 ಮಾರುಕಟ್ಟೆ. ಒಟ್ಟು ಬಿತ್ತನೆ ಏರಿಯಾ ಮತ್ತು ನಾನ್ ಬಿತ್ತನೆ ಏರಿಯಾ ಸೇರ 64 ಮಾರುಕಟ್ಟೆಗಳು ಬರತಕ್ಕದ್ದು. ಮಾನ್ಯ ಜಯಚಂದ್ರ ಅವರು ಸಿರಾದಲ್ಲಿ ಒಂದು ಮಾರಕಟ್ಟೆ ತೆಗೆಯಬೇಕೆಂದು ಕೇಳುತ್ತಿದ್ದಾರೆ. ಸಿರಾದಲ್ಲಿ ಈಗ ಹಾಲಿ ನಮ್ಮ ತುಮಕೂರು ಮತ್ತು ಚಿತ್ರದುರ್ಗದಲ್ಲಿ ಮಾರುಕಟ್ಟೆ ಇರುವುದರಿಂದ ಸಿರಾ ಡಿಸ್ಟ್ರಿಕ್ಟನ ಮಧ್ಯದಲ್ಲಿರುವುದರಿಂದ, ಒಂದು ಮಾರುಕಟ್ಟೆಯಲ್ಲಿ ನಡೆಯತಕ್ಕ ವಹಿವಾಟು ಅಲ್ಲಿಗೆ ಬರದೇ ಇರುವುದರಿಂದ ಸಿರಾದಲ್ಲಿ ಸಧ್ಯದಲ್ಲಿ ಮಾರುಕಟ್ಟೆ ಮಾಡುವಂತಹ ಪ್ರಸ್ತಾವನೆ ಉದ್ಭವಿಸುವುದಿಲ್ಲ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನನ್ನ ಪ್ರಶ್ನೆ ಏನು ಅಂದರೆ, ತಾವು ನಮ್ಮ ಜಿಲ್ಲೆಗೆ ಸೇರಿರತಕ್ಕವರು. ತಮಗೆಲ್ಲಾ ಗೊತ್ತಿರತಕ್ಕದ್ದು, ಪ್ರಸ್ತಾವ ನಿಮ್ಮ ಸರ್ಕಾರದ ಮುಂದೆ ಇಲ್ಲದೇ ಇರಬಹುದು. ಏಕೆ ಪ್ರಾರಂಭ ಮಾಡಬಾರದು? ಏಕೆಂದರೆ ಚಿತ್ರದುರ್ಗದಲ್ಲಿ ಅಷ್ಟೊಂದು ನೀವು ನಿರೀಕ್ಷಣೆ ಮಾಡಿ ಮಾರುಕಟ್ಟೆ ಮಾಡಿದರೂ ಸಹಿತ ನಿಮಗೆ ಗೂಡು ಬರುತ್ತಿಲ್ಲ. ತುಮಕೂರಿನಲ್ಲಿ ಬರುತ್ತದೆ. ಏಕೆಂದರೆ ಕುಣಿಗಲ್‌ನಲ್ಲಿ ಕಾನಸೆಂಟ್ರೇಟ್ ಆಗಿರುವುದರಿಂದ. ಆ ಮಧ್ಯದಲ್ಲಿ ಸುಮಾರು 200 ಕಿಲೋಮೀಟರ್ ಮಧ್ಯದಲ್ಲಿ ಸಿರಾದಲ್ಲಿ ಮಾಡಿದರೆ ಖಂಡಿತ ಪ್ರಯೋಜನ ಆಗುತ್ತದೆ. ದಯಮಾಡಿ ನೀವು ಅದರ ಬಗ್ಗೆ ಆಲೋಚಿಸಬೇಕು. ಸಧ್ಯಕ್ಕೆ ಆ ಕುರಿತ ಪ್ರಸ್ತಾವ ಇಲ್ಲದಿರಬಹುದು, ಅದನ್ನು ನಾವು ಮಾಡುತ್ತೇವೆನ್ನುವ ಆಶ್ವಾಸನೆಯನ್ನಾದರೂ ಕೊಡಿ. ತಾವು ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿ ಅಷ್ಟೂ ಆಶ್ವಾಸನೆ ಕೊಡದಿದ್ದರೆ ಹೇಗೆ?

ಶ್ರೀ ಡಿ. ನಾಗರಾಜಯ್ಯ : ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಗ್ಗೆ ಚಿಂತಿಸುವ ಪರಿಸ್ಥಿತಿಯೂ ಉಳಿದಿಲ್ಲ. ಕಾರಣ, ಇವೊತ್ತು ಒಂದು ಮಾರುಕಟ್ಟೆ ತೆರೆಯಬೇಕಾದರೆ ಲಕ್ಷಗಟ್ಟಲೆ ಹಣ ಖರ್ಚಾಗುತ್ತದೆ. ಮತ್ತು ಸರಾಸರಿ ದಿನವೊಂದಕ್ಕೆ 500-600 ಕಿಲೋಗ್ರಾಂಗಳಷ್ಟು ರೇಷ್ಮೆಗೂಡುಗಳು ಬರಲಿಲ್ಲವೆಂದರೆ

ಮಾರುಕಟ್ಟೆ ವಹಿವಾಟು ನಡೆಯುವುದು ತುಂಬಾ ಕಷ್ಟವಾಗುತ್ತದೆ. ಇಮೊತ್ತು ತುಮಕೂರು ಮತ್ತು ಸಿರಾದಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆ ವಹಿವಾಟು ಸರಿಯಾಗಿ ನಡೆಯದಿರುವುದರಿಂದ ಆ ಭಾಗದ ರೈತರು ತಾವು ಉತ್ಪಾದಿಸಿದಂಥ ರೇಷ್ಮೆಗೂಡುಗಳನ್ನು ರಾಮನಗರ, ಚನ್ನಪಟ್ಟಣ, ಕನಕಪುರ, ಮತ್ತು ಶಿಡ್ಲಘಟ್ಟಕ್ಕೆ ತರುತ್ತಿರುವುದರಿಂದ ತುಮಕೂರು ಮತ್ತು ಚಿತ್ರದುರ್ಗದಲ್ಲಿರುವ ಎರಡೂ ರೇಷ್ಮೆಗೂಡಿನ ಮಾರುಕಟ್ಟೆಗಳನ್ನು ಸ್ವಲ್ಪ ಅಭಿವೃದ್ಧಿಪಡಿಸಿದ ನಂತರ ಅಲ್ಲಿ ರೇಷ್ಮೆ ಬಿತ್ತನೆ ಬಗ್ಗೆ ಚಿಂತನೆ ಮಾಡಬಹುದೇ ಹೊರತು ಸಧ್ಯಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ..

ಶ್ರೀ ಟಿ.ಬಿ. ಜಯಚಂದ್ರ : ತುಮಕೂರು ಅಥವಾ ಚಿತ್ರದುರ್ಗದಲ್ಲಿ ನಷ್ಟದಲ್ಲಿ ನಡೆಯುತ್ತಿರುವ ರೇಷ್ಮೆಗೂಡಿನ ಮಾರುಕಟ್ಟೆಗಳನ್ನು ಬೇರರೆಡೆಗೆ ವರ್ಗಾಯಿಸಿದರೆ ಸರ್ಕಾರಕ್ಕೆ ಹಣವೇನೂ ಖರ್ಚಾಗುವುದಿಲ್ಲ. ಇದರ ಬಗ್ಗೆ ವೈಯಕ್ತಿಕವಾಗಿ ತಮಗೆ ಸಾಕಷ್ಟು ಸಲ ಹೇಳಿದ್ದೇನೆ. ತುಮಕೂರಿನಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆಯನ್ನು ವರ್ಗಾಯಿಸುವ ಬಗ್ಗೆ ಸಚಿವರು ಯೋಚನೆ ಮಾಡಬಹುದು.

ಶ್ರೀ ಡಿ. ನಾಗರಾಜಯ್ಯ : ಈಗ ವರ್ಗಾಯಿಸುವ ಪ್ರಶ್ನೆಯಲ್ಲ. ಮಾರುಕಟ್ಟೆಯನ್ನು ಬೇರೆಡೆಗೆ ವರ್ಗಾಯಿಸಬೇಕಾದರೆ ಆ ಮಾರುಕಟ್ಟೆಯ ಸ್ಥಾಪನೆಗೆ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದು, ಮಾರುಕಟ್ಟೆಯ ಕಟ್ಟಡವನ್ನು ಶಿಫ್ಟ್ ಮಾಡಲು ಸಾಧ್ಯವಿಲ್ಲ. ವರ್ಗಾಯಿಸಿದರೂ ಚಿಂತೆಯಿಲ್ಲ ಅಥವಾ ಮಾರುಕಟ್ಟೆಯನ್ನು ಪ್ರಾರಂಭಮಾಡವುದಕ್ಕಾಗುವುದಿಲ್ಲವೆಂದು, ಒಂದು ವೇಳೆ ಮಾರುಕಟ್ಟೆಯ ವಹಿವಾಟು ನಡೆಯಲಿಲ್ಲವೆಂದಾಗಲೂ ಮಾರುಕಟ್ಟೆಯನ್ನು ಪ್ರಾರಂಭಿಸುವುದರಿಂದ ಹಣ ಖರ್ಚಾಗುತ್ತದೆಯೇ ಹೊರತು ಉದ್ದೇಶ ಸಫಲವಾಗುವುದಿಲ್ಲವೆನ್ನುವುದನ್ನು ಗಮನದಲ್ಲಿಟ್ಟುಕೊಂಡು ತಾವು ಇನ್ನು ಮುಂದೆ ರೈತರನ್ನು ಶಿಕ್ಷಿತರನ್ನಾಗಿ ಮಾಡುವುದರ ಮುಖಾಂತರ ಅತಿ ಹೆಚ್ಚು ರೇಷ್ಮೆ ಬೆಳೆ ಬೆಳೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ನೀವು ರೇಷ್ಮೆ ಬೆಳೆ ಬೆಳೆಯುವಂಥ ಸಂದರ್ಭದಲ್ಲಿ ಅಲ್ಲಿ ಮಾರುಕಟ್ಟೆ ತೆರೆಯಲು ಸರ್ಕಾರಕ್ಕೆ ಯಾವುದೇ ವಿಧವಾದ ತೊಂದರೆಯಿಲ್ಲ, ಖಂಡಿತವಾಗಿಯೂ ತೆರೆಯುತ್ತೇವೆ. ಆ ಮಟ್ಟಕ್ಕೆ ನೀವು ರೇಷ್ಮೆ ಬೆಳೆಗಾರರನ್ನು ತಯಾರಿಸಿ ರೇಷ್ಮೆ ಬೆಳೆ ಬೆಳೆಯುವಂಥ ವ್ಯವಸ್ಥೆಯನ್ನು ನೀವು ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಆಶ್ರಯ ಯೋಜನೆಯಡಿಯಲ್ಲಿ ವಿತರಿಸಲಾದ ಮನೆಗಳು

97 - ಶ್ರೀ ಕುಂಬ್ಳೆ ಸುಂದರರಾವ್ (ಸುರತಕ್ಕಲ್) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕುಬಜ್ಪೆ ಪಂಚಾಯತ್ ವ್ಯಾಪ್ತಿಯಲ್ಲಿ ಇದುವರೆವಿಗೂ ಆಶ್ರಯ ಯೋಜನೆಯಡಿ ಕೊಡಲಾದ ಮನೆಗಳೆಷ್ಟು?

ಆ) ಅವುಗಳಲ್ಲಿ ಹಣ ಸಂದಾಯವಾದರೂ ಮನೆ ಪೂರ್ತಿಯಾಗದೆ ಉಳಿದಿವೆಯೆಂಬುದು ನಿಜವೇ?